ಶ್ರೀ ಶಿವಾನಂದ ಹೆಚ್. ಕೌಜಲಗಿ : ಕಲುಬುರ್ಗಿಯ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ಪ್ರಾಧ್ಯಪಕರ ಮೇಲೆ ಹಲ್ಲೆ ಆಗಿದೆ. ಆದನ್ನು ಖಂಡಿಸಿ ನಾನು ನಿಮಗೆ ಒಂದು ನೋಟೀಸ್ ಕೊಟ್ಟಿದ್ದೇನೆ.

ಘಟಪ್ರಭಾ ಎಡದಂಡೆ ನಾಲಾದಿಂದ ನೀರು ನಿಲ್ಲಿಸಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ ನಿನ್ನೆದಿನ ನಾನು ಒಂದು ನಿಲುವಳಿಯ ಸೂಚನೆಕೊಟ್ಟಿದೆ. ಬಿಜಾಪುರ ಜಿಲ್ಲಾ ಬಿಳಗಿ ತಾಲ್ಲೂಕಿನಲ್ಲಿಯ ಘಟಪ್ರಭಾ ಎಡದಂಡೆ ನೀರು ನಿಲ್ಲಿಸಿದ ಬಗ್ಗೆ ಬಾಬಾಗೌಡ ಪಾಟೀಲರು ಕೂಡ ನಿನ್ನೆ ದಿವಸ ಪ್ರಸ್ತಾಪಿಸಿದ್ದುರು ಇದು ಬಹಳ ಮುಖ್ಯವಾದ ವಿಷಯ ಅಲ್ಲಿ ಕಳೆದ 15 ದಿವಸಗಳಿಂದ ರೈತರುಗಳು ಮುಷ್ಕರ ಮಾಡುತ್ತಾ ಇದ್ದಾರೆ. ಈ ಬಗ್ಗೆ ತಮಗೆ ನೋಟೀಸ್ ಕೊಡ ಕಳುಹಿಸಿಕೊಟ್ಟಿದ್ದೇನೆ. ಕಾನೂನಿನ ಪರಿಸ್ಥಿತಿಯು ಅಲ್ಲಿ ಉದ್ಭವವಾಗತಕ್ಕಂಥ ಒಂದು ಸನ್ನಿವೇಶ ಇದೆ. ಈ ಸಂದರ್ಭದಲ್ಲಿ ನಾನು ಸರಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅಲ್ಲಿ ಮೇಲುಗಡೆ ಇರತಕ್ಕಂಥ ರೈತರು ಎರಡು ಬೆಳೆ ಬೆಳೆಯುತ್ತಾರೆ. ಕೊನೆಭಾಗದವರಿಗೆ ನೀರು ಸರಬರಾಜು ಸರಿಯಾಗಿಲ್ಲ. ಅಲ್ಲಿ ಹೋದ ವರ್ಷ ಕೂಡ ಬೆಳೆ ಆಗಿಲ್ಲ. ಈ ವರ್ಷ ಕೂಡ ನೀರು ಇಲ್ಲದೆ ಸುಮಾರು 10 ಕೋಟಿ ರೂಪಾಯಿಗಳಷ್ಟು ಬೆಳೆ ಅಲ್ಲಿ ಉಳಿದುಕೊಂಡಿದೆ. ನೀರು ಇಲ್ಲದೇ ಅಷ್ಟು ಬೆಳೆ ಹಾಳಾಗಿ ಹೋಗುವ ಒಂದು ಸ್ಥಿತಿ ಬರಬಾರದು. ಅದಕ್ಕಾಗಿ ಸೂಕ್ತ ಕ್ರಮವನ್ನು ಕೂಡಲೇ ಸರಕಾರದರವರು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ನಾಲಾ ಕೊನೆಯ ಬಯಲಿನಲ್ಲಿ ಇರತಕ್ಕಂಥ ಪ್ರದೇಶಗಳ ಪರಿಸ್ಥಿತಿಯು ಎಲ್ಲಾ ಕಡೆಯೂ ಒಂದೇ ಆಗಿರುತ್ತದೆ. ಅದು ಬಿಳಗಿ ಆಗಿರಲಿ ಅಥವಾ ಮದ್ದೂರು ಆಗಿರಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಈ ಸೂಚನೆಯ ಮೇಲೆ ನಮಗೆ ಮಾತನಾಡಲು ಅವಕಾಶ ಕೊಡಿ. ಏಕೆಂದರೆ ಇವೊತ್ತು ಸದನ ಮುಗಿದು ಮತ್ತೆ ಯಾವಾಗ ಸೇರುತ್ತದೋ ನಮಗೆ ಗೊತ್ತಿಲ್ಲ.

ಅಧ್ಯಕ್ಷರು : ಯಾವಾಗ ಸೇರುತ್ತದೆ ಎಂಬುದನ್ನು ನಾವು ತಮಗೆ ತಿಳಿಸುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಷ್ಟರಲ್ಲಿ ಅಲ್ಲಿಯ ಬೆಳೆಯಲ್ಲಾ ಹಾಳಾಗಿ ಹೋಗುತ್ತದೆ. ಈ ಕುರಿತು ಸರಕಾರದ ವತಿಯಿಂದ ಒಂದು ಉತ್ತರವನ್ನು ನಾನು ನಿರೀಕ್ಷೆ ಮಾಡುತ್ತೇನೆ.

ಅಧ್ಯಕ್ಷರು : ಬಾಬಾಗೌಡ ಪಾಟೀಲರು ಇದನ್ನು ಹೇಳಿದ್ದಾರೆ ಈಗ ಏನಾದರು ಹೇಳುವುದಿದ್ದರೆ ಹೇಳಲಿ.

ಶ್ರೀ ಬಾಬಾಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ ಅಲ್ಲಿ ಅಧಿಕೃತ ಬೆಳೆಗೆ ನೀರು ಇಲ್ಲ ಆದರೆ ಅನಿಧಿಕೃತ ಬೆಳೆಗೆ ನೀರು ಕೊಡಬೇಕೆಂದು ಅಲ್ಲಿ ರಾಜಕೀಯ ನಡೆಯುತ್ತಿದೆ ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನೀಯರ್‌ರವರು ಮತ್ತು ಸೂಪರಿಂಟೆಂಡಿಂಗ್ ಇಂಜಿನಿಯರ್ ತಾವು ಜನರಿಗೆ ಮುಖ ತೋರಿಸುವುದು ಹೇಗೆ? ಎಂದು ರಜೆ ತೆಗೆದುಕೊಂಡು ಹೋಗಿ ಬಿಟ್ಟಿದ್ದಾರೆ. ಅಲ್ಲಿ ಅಧಿಕೃತ ಮತ್ತು ಅನಧಿಕೃತ ಬೆಳೆಗಳಿಗೆ ನೀರು ಕೊಡಲು ಸಾಕಷ್ಟು ನೀರಿಲ್ಲ. ಈಗ ಪೈರು ಹಾಳಾಗಿ ಹೋಗುತ್ತಿರುವುದು ಗೊತ್ತಿದ್ದೂ ಮಾನವೀಯತೆಯ ದೃಷ್ಟಿಯಿಂದಾದರೂ ನೀರು ಕೊಡುವುದು ಬೇಡವೆ? ಅಲ್ಲಿಯ 34 ಹಳ್ಳಿಗಳಿಗೆ ನೀರು ಕೊಟ್ಟಿಲ್ಲ. ಅಲ್ಲಿ ಒಂದು ರೀತಿಯ ರಾಜಕೀಯ

ನಡೆದಿದ್ದು ಆದರಿಂದ ಈ ವಾತಾವರಣ ಉಂಟಾಗಿದೆ. ನೀರು ಕಡಿಮೆ ಇದೆ ಆದ್ದರಿಂದ ಮೊದಲು ಅಧಿಕೃತ ಬೆಳೆಗೆ ನೀರು ಕೊಡಿ ಆ ಮೇಲೆ ಬೇಕಾದರೆ ಅನಧಿಕೃತ ಬೆಳೆಗೆ ನೀರು ಕೊಡಿ ನಾವು ಅದಕ್ಕೆ ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸಿಂಧ್ಯಾ ಅವರು ಮತ್ತು ಮಾನ್ಯ ಸದಸ್ಯರಾದ ಬಾಬಾಗೌಡ ಪಾಟೀಲರು ಎತ್ತಿದಂಥ ಪ್ರಶ್ನೆ ವಿಚಾರವು ಈಗ ತಾನೆ ನಮ್ಮ ಗಮನಕ್ಕೆ ಬಂದಿದೆ. ಅದನ್ನು ಯಾವರೀತಿಯಲ್ಲಿ ಸರಿಪಡಿಸಬೇಕೆಂಬ ಬಗ್ಗೆ ಸರಕಾರ ಸೂಕ್ತಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ ಗೃಹಸಚಿವರು ಇದ್ದಾರೆ ನಾನು ನಿನ್ನೆಏನು ಹೇಳಿದೆ ಅದರ ಬಗ್ಗೆ ಅವರು ಒಂದು ಮಾತನ್ನು ಹೇಳಿದರೆ ಒಳ್ಳೆಯದು. ನಿನ್ನೆ ನಾನು ಏನು ಹೇಳಿದ್ದೇನೆಂದರೆ ದಾಂಡೇಲಿಯಲ್ಲಿ ಡಿ.ವೈ.ಎಸ್.ಪಿ. ನೇತೃತ್ವದಲ್ಲಿ ವೆಸ್ಟ್‌ಕೋರ್ಸ್ ಎಂಪ್ಲಾಯಿಸ್ ಇದ್ದಾರಲ್ಲಾ ಅವರ ಮೇಲೆ ರಾತ್ರಿ...

ಅಧ್ಯಕ್ಷರು : ಇದು ಯಾವ ಪೇಪರ್‌ನಲ್ಲೂ ಬರಲಿಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ : ಬಂದಿದೆ.

ಶ್ರೀ ಆರ್. ಧರ್ಮಸಿಂಗ್ (ಗೃಹಸಚಿವರು) : ದಾಂಡೇಲಿಯಲ್ಲಿ ನಡೆದಂಥ ಪ್ರಕರಣದ ಬಗ್ಗೆ ವಿಧಾನ ಪರಿಷತ್ತಿನಲ್ಲಿಯೂ ಈ ವಿಷಯವನ್ನು ಎತ್ತಿದ್ದರು. ಆ ವಿಷಯದ ಬಗ್ಗೆ ತನಿಖೆಯನ್ನು ಮಾಡಲಿಕ್ಕೆ ಹೇಳಿದ್ದೇನೆ. ಡಿ.ವೈ.ಎಸ್.ಪಿ. ಅಲ್ಲಿಗೆ ಹೋಗಿ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. ಅದರ ಬಗ್ಗೆ ಈಗಾಗಲೇ ನಾನು ಸೀನಿಯರ್ ಆಫಿಸರ್ಸ್‌ಗೆ ಹೇಳಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಏನು ವಿನಂತಿ ಮಾಡಿಕೊಳ್ಳುವುದೆಂದರೆ ನನಗೇನು ಇದರ ಬಗ್ಗೆ ಬಹಳ ದೊಡ್ಡ ತನಿಖೆಯೇನೂ ಬೇಡ. ನಿಮ್ಮ ಕಾಂಗ್ರೆಸ್ ಪಕ್ಷದ ಶಾಸಕರ ಒಂದು ಸಮಿತಿಯನ್ನು ಅಲ್ಲಿಗೆ ಕಳುಹಿಸಿ ಅವರಿಂದ ಒಂದು ರಿಪೋರ್ಟನ್ನು ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಆರ್. ಧರ್ಮಸಿಂಗ್ : ಅಷ್ಟೇನೂ ಬೇಕಾಗಿಲ್ಲ. ನಿಮ್ಮ ಮೇಲೆ ಕೂಡಾ ನಮಗೆ ವಿಶ್ವಾಸ ಇದೆ. ಅದನ್ನು ನಾವು ಮಾಡುತ್ತೆವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಮ್ಮ ಮೇಲೆ ಅವರಿಗೆ ವಿಶ್ವಾಸ ಇದೆ ಮಾನ್ಯ ಗೃಹಸಚಿವರು ಜನಹಿತ ದೃಷ್ಟಿಯಿಂದ ಕೆಲಸವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ನಮ್ಮಗಳ ಮೇಲೆ ಅವರಿಗೆ ವಿಶ್ವಾಸ ಇದೆ.

(ಗೊಂದಲ)

ಶ್ರೀ ಶಿವಾನಂದ ಎಚ್. ಕೌಜಲಗಿ : ಗೃಹ ಸಚಿವರು ಇದ್ದಾರೆ. ಕಲಬುರ್ಗಿಯಲ್ಲಿ.....

(ಗೊಂದಲ)

ಅಧ್ಯಕ್ಷರು : ನಿಮಗೆ ಈ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಒಂದೆರಡು ವಿಚಾರಗಳ ಬಗ್ಗೆ ಸಮಯ ತೆಗೆದುಕೊಳ್ಳದೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ.

ಅಧ್ಯಕ್ಷರು : ಅವಕಾಶ ಕೊಡೋಣ

LEGISLATIVE BUSINESS

THE KARNATAK LAND REFORMMS SECOND AMENDMENT) BILL 1990

(LEAVE TO INTRODUCE)

SRI MALLIKARJUNA M. KHARGE (Minister for Revenud) Sir I beg to move:

"That leave be granted to intorduce the Karnataka Land reforms (second Amendment) Bill, 1990"

MER SPEAKER The question is:

"That leave be granted to introduce the Karnataka Land Reforms (Second Amendment Bill, 1990".

The motion was adopted and leave was granted.

M. MALLIKARJUNA KHARGE (Minister for Revenue): Sir,

I introduce:

"The Karnataka Land Reforms (Second Amendment) Bill 1990."

MR.SPEAKER: The Bill is introduced.

THE KARNATAKA LEAGISLATURE SALARIES, PENSIONS AND ALLOWANCES (AMENDMENT BILL, 1990.

(LEAVE TO INTRODUCE)

SRI M. VEERAPPA MOLLY (Minister for Education and Parliamentary Affairs): Sir, I beg to move:

"That leave be granted to introduce the karnataka Legislature Salaries, Pensions and Allowances (Amendment) Bill, 1990".

Mr. speaker: The question is:

"The leave be granted to introduce the Karnataka Ministers, Salaries, Pensions and Allowances (Ammendment) Bill, 1990"

The motion was adopted and leave was granted